ಶ್ರೀ ಸಿದ್ದಯ್ಯ ಕಾಶೀಮ :— ಈ ಕುರುಬರ ಉಣ್ಣೆಯ ಔದ್ಯೋಗಿಕ ಸಂಘದಲ್ಲಿ ಈ ಒಟ್ಟಿ ರಿಬೇಟಿನಲ್ಲ ಅಪವ್ಯಯವಾಗಿರುವುದರಿಂದ ರಾಜ್ಯಾದ್ಯಂತ ಇದರ ತನಿಖೆ ಮಾಡುವಂತೆ ಬಂದು ಸ್ಪೆಶಲ್ ಆಡಿಟ್ ಸೆಲ್ ನೇಮಿಸುತ್ತೀರಾ?

ಶ್ರೀ ಬಿ. ಎಲ್. ಗೌಡ:—ಇಲ್ಲ ಸ್ವಾಮಿ.

ಶ್ರೀ. ಎನ್. ಎಲ್. ಬೆಲ್ಲದ್:— ಸಾರ್ವತ್ರಿಕವಾಗಿ ನೇಮಿಸುವಂತಹ ಪರಿಪಾಠ ಇಟ್ಟುಕೊಳ್ಳದಿದ್ದರೂ ಇಲ್ಲಿ ೧೦-೧೫ ಲಕ್ಷ ರೂಪಾಯಿಯ ವ್ಯವಹಾರ ಆಗಿರುವುದರಿಂದ ಇಲ್ಲಿ ತಾವು ನೇಮಿಸಲೇ ಬೇಕು ಎಕೆಂದರೆ ರಿಬೇಟ್ ಸಲುವಾಗಿ ಲೆಕ್ಕ ಪತ್ರ ತಯಾರು ಮಾಡಲಾಗಿದೆ. ಇದರಲ್ಲಿ ನೀವಾಗಿ ಖರೀದಿ ಮಾಡಿದವರು ಯಾರು ಪ್ರೊಡ್ಯೂಸ್ ಮಾಡಿದವರು ಯಾರೆಂದು ಇಲ್ಲ. ಇದನ್ನು ವಿವರವಾಗಿ ತನಿಖೆ ಮಾಡಿದ್ದೀರಾ

ಶ್ರೀ ಬಿ. ಎಲ್. ಗೌಡ:—ತನಿಖೆ ಮಾಡಿದೆ. ಆಡಿಟ್‌ನವರು ಪರಿಶೀಲನೆ ಮಾಡಿದ್ದಾರೆ. ೭ಲಕ್ಷ ೩೦ ಸಾವಿರ ರೂಪಾಯಿ ಕೊಟ್ಟಿದ್ದರಲ್ಲಿ ಯಾವ ಬಾಕಿಯೂ ಇಲ್ಲ. ವರ್ಷ ವರ್ಷ ಕಂತು ಕಂತಿನಲ್ಲಿ ಬಡ್ಡಿ ಸಮೇತ ೬ಲಕ್ಷ ಚಿಲ್ಲರೆ ವಾಪಸ್ಸು ಬಂದಿದೆ. ನಮ್ಮ ವರದಿ ಪ್ರಕಾರ ಅದು ಚೆನ್ನಾಗಿ ನಡೆಯುತ್ತಿದೆ ಎಂದು ತಿಳಿದು ಕೊಂಡಿದ್ದೇನೆ.

ಶ್ರೀ ಬಾಪುಗೌಡ:—ಈವರ್ಷದಲ್ಲಿ ನೆಟ್ ಪ್ರೋಫಿಟ್ ಎಷ್ಟು ಬಂದಿದೆ?

ಶ್ರೀ ಬಿ. ಎಲ್. ಗೌಡ:—ಒಂದು ಸಾವಿರವ ೯೦ರೂಪಾಯಿ.

ಶ್ರೀ ಆಜೀಜ್ ಶೇಠ್:— ಈ ಕೋಆಪರೇಟಿವ್ ಇಲಾಖೆಯಲ್ಲಿ ನಾರ್ಮಲ್ ಕೋರ್ಸಿನಲ್ಲಿ ಆಡಿಟ್ ಸೆಲಿನವರು ಎಲ್ಲಾ ಸೊಸೈಟಿಗಳಿಗೂ ಹೋಗಿ ಆಡಿಟ್ ಮಾಡುತ್ತಾರಾ?

ಶ್ರೀ ಬಿ. ಎಲ್. ಗೌಡ:—ಹೌದು.

ಶ್ರೀ ಕೆ. ಎಂ. ತಮ್ಮಯ್ಯ:— ಸಾಮಾನ್ಯವಾಗಿ ಸೊಸೈಟಿಗಳಲ್ಲಿ ಹಣ ಕೊಟ್ಟರೆ ಪೂರ್ತಿಯಾಗಿ ವಸೂಲಾಗುವುದಿಲ್ಲ ಆದರೆ ಈ ಸೊಸೈಟಿಯಲ್ಲಿ ಪೂರ್ತಿಯಾಗಿ ವಸೂಲಾಗಿದೆ. ಅಂದರೆ ಇಲ್ಲಿ ಪೆಚು ದುಡ್ಡು ಬಡವರಿಗೆ ಹೋಗುವ ಬದಲು ದೊಡ್ಡ ಮನುಷ್ಯರಿಗೆ ಹೋಗಿದ್ದ ಕಾರಣವಲ್ಲವೇ?

ಶ್ರೀ ಬಿ. ಎಲ್. ಗೌಡ:—ಯಾರ್ಯಾರು ಹಣ ತೆಗೆದುಕೊಂಡಿದ್ದಾರೆ, ಅವರು ಅದನ್ನು ಉಪಯೋಗಿಸಿ ಕೊಂಡು ವಾಪಸ್ಸು ಕೊಟ್ಟಿದ್ದಾರೆ.

REGULARISATION OF EXCESS EXPENDITURE INCURRED BY THE EXECUTIVE ENGINEER, CHICKMAGALUR.

254. Sri N. G. HALAPPA (Channagiri):—

Will the Minister for Public Works be pleased to state:—

(*a*) whether the Government has passed any order regularising the excess expenditure by the Executive Engineer, Chickmagalur;

(*b*) if so, the works in which such excess expenditure was incurred;

(SRI N. G. HALAPPA)

(*c*) whether any estimates were prepared for such works and the estimated value of each such works (details may be furnished);

(*d*) the total amount of excess expenditure incurred (the details of excess expenditure for each work may be furnished;

(*e*) whether the Government called for any report from the Superintending Engineer, Shimoga or the Chief Engineer, before regularising the excess expenditure, or there was any report from the Superintending Engineer, Shimoga and the Chief Engineer in this regard;

(*f*) if so, the recommendations made in the report;

(*g*) whether the report would be placed on the Table of the House;

(*h*) whether there was any previous permission by any of the oncerned authorities, to incur such excess expenditure;

(*i*) if so, whether the permission was oral or it was in writing;

(*j*) whether the said Executive Engineer has prayed for any such permission prior to the incurring of such excess expenditure?

(Sri BASAVARAJ MAGAVI(Deputy Minister for Public Works):—

(*a*) Instruction were issued to the Chief Engineer(C & B) to allocate the additional funds sought for by the Executive Engineer, Chickmagalur Division, to regularise the expenditure under Final Re-appropriation of sanctioned grants during the year 1968-69.

(*b*) (1) D. L. B. Roads
(5)R. C. Roads.
(3)Missing Links.

(*c*) Yes, *Vide* Statement placed on the Table of the House.*

(*d*) Rs. 3,26,716, *Vide* Statement placed on the Table of the House.*

(*e*) No.

(*f*) Does not arise in view of reply to clause (*e*) above.

(*g*) Does not arise in view of reply to clause (*e*) and (*f*) above.

(*h*) The Executive Engineer, Chickmagalur Division was instructed to take up more works with a view to provide employment for the needy people as the seasonal conditions during 68-69 were bad.

(*i*) Oral.

(*j*) The Executive Engineer had not prayed for any written permission.

* Copy placed in the Mysore Legislature library.

ಶ್ರೀ ಎನ್ ಜಿ ಹಾಲಪ್ಪ:— (ಎ)ಗೆ ಉತ್ತರವಾಗಿ ೬೯-೭೯ನೇ ಸಾಲಿನಲ್ಲಿ ಮಂಜೂರಾದ ಅನುದಾನಗಳ ಅಂತಿಮ ಹಣ ಪುನರ್ ವಿನಿಯೋಗದ ಬಾಬಿನ ಮೇರೆಗೆ ಕ್ರಮಗೊಳಿಸುವಂತೆ ಚಿಕ್ಕಮಗಳೂರು ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಕೋರಿದ್ದ ಹೆಚ್ಚಿನ ಹಣವನ್ನು ಗೊತ್ತು ಮಾಡಿ ಕೊಡುವಂತೆ ಮುಖ್ಯ ಇಂಜಿನಿಯರಿಗೆ ತಿಳುವಳಿಕೆ ನೀಡಲಾಗಿದ್ದಿತು, ಎಂದು ಹೇಳಿದ್ದಿರಿ. ಆವರು ಚೀಫ್ ಇಂಜಿನಿಯರ್ ಮುಖಾಂತರ ಕಳಿಸಿದರೇ, ಆಥವಾ ನೇರವಾಗಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರೇ?

ಶ್ರೀ ಬಸವರಾಜ ಮಾಗಾವಿ: ಎಕ್ಸಿಕ್ಯೂಟಿವ್ ಇಂಜನಿಯರು ಎಲ್ಲೆಲ್ಲಿ ಹೆಚ್ಚಾಗಿ ವ್ಯಯ ಮಾಡುತ್ತಾರೆ, ಆ ವ್ಯಯ ಸರಿಯಾಗಿ ಮಾಡಿದ್ದಾರೆಂಬುದು ಕಂಡು ಬಂದರೆ, ಫೈನಲ್ ರಿಅಪ್ರೋಪ್ರಿಯೇಶನ ಗ್ರಾಂಟಿನಲ್ಲಿ ಚೀಫ್ ಇಂಜಿನಿಯರಿಗೆ ಲಂಪ್‌ಸಂ ಗ್ರಾಂಟ್ ಕೊಡುವುದಕ್ಕೆ ಅಧಿಕಾರ ಇದೆ. ಈ ರೀತಿ ಚೀಫ್ ಇಂಜಿನಿಯರ್ ಲಂಪ್‌ಸಂ ಗ್ರಾಂಟಿನಿಂದ ಹಣ ಒದಗಿಸುತ್ತಾರೆ.

ಶ್ರೀ ಎನ್ ಜಿ ಹಾಲಪ್ಪ:—ಇಲ್ಲಿ ಪರ್ಮಿಶನ್ ಓರಲ್ ಆಗಿ ಕೊಟ್ಟಿದ್ದು ಎಂದು ಇದೆ. ಓರಲ್ ಆಗಿ ಪರ್ಮಿಶನ್ ಯಾರುಕೊಟ್ಟಿದ್ದು, ಮತ್ತು ಯಾವಾಗ, ಇಂಥ ದಿವಸ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಬಸವರಾಜ ಮಾಗಾವಿ: ೬೮-೬೯ರಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಇತ್ತು. ಅಲ್ಲಿ ಕೂಡ ಅಭಾವ ಪರಿಸ್ಥಿತಿಯ ಕೆಲಸಗಳನ್ನು ಒದಗಿಸಬೇಕೆಂದು ಮಾನ್ಯ ಲೋಕೋಪಯೋಗಿ ಮಂತ್ರಿಯವರಿಗೆ ಮುಖ್ಯ ಮಂತ್ರಿಯವರು ವಿನಂತಿಸಿಕೊಂಡರು. ಆ ಪ್ರಕಾರ ಹೆಚ್ಚಾಗಿ ಕೆಲಸ ಒದಗಿಸುವುದು ಎಲ್ಲೆಲ್ಲಿ ಸಾಧ್ಯ ಇದೆ ಅಲ್ಲಿ ಯಾವ್ಯಾವ ಕೆಲಸ ಮಾಡಬಹುದು, ಆದು ಮಾಡಿ ಪರವಾ ಇಲ್ಲ ಎಂದು ಪಿ ಡಬ್ಲ್ಯೂ ಡಿ ಮಂತ್ರಿಯವರು ಅಪ್ಪಣೆ ಕೊಟ್ಟಿದ್ದರು. ಆನಂತರ ಆವರು ಬರೆದು ಕನ್‌ಫರ್ಮ್ ಮಾಡಿಕೊಂಡಿದ್ದಾರೆ.

ಶ್ರೀ ಎಸ್ ವಿ: ಅಗ್ನಿಹೋತ್ರಿ.—ಇಲ್ಲಿ ಚಿಕ್ಕಮಗಳೂರಿನ ಎಕ್ಸಿಕ್ಯೂಟಿವ್ ಇಂಜಿನಿಯರು ಹೆಚ್ಚಿನವೆಚ್ಚ ಮಾಡಿದ್ದಾರೆ, ಕ್ರಮಗೊಳಿಸುವುದು ಎಂದು ಇದೆ. ಆದೇ ರೀತಿ ಧಾರವಾರದ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೆಚ್ಚಿನ ರೊಕ್ಕ ಖರ್ಚು ಮಾಡಿದ್ದರೆ ಸರಿಪಡಿಸುತ್ತೀರಾ?

ಶ್ರೀ ಬಸವರಾಜ ಮಾಗಾವಿ.—ಅದು ಇದಕ್ಕೆ ಸಂಬಂಧಪಟ್ಟದ್ದಲ್ಲ.

ಶ್ರೀ ಕೆ ಎಚ್ ರಂಗನಾಥ್.—ಮಾನ್ಯಮಂತ್ರಿಯವರು ೧೯೬೮ರಲ್ಲಿ ಅಭಾವ ಅಲ್ಲಿ ಇತ್ತು ಎಂದು ಹೇಳಿದರು. ಆ ರೀತಿ ಅಭಾವಕ್ಕೆ ಒಳಗಾದಂತಹ ತಾಲ್ಲೂಕುಗಳು ಯಾವುವು ಮತ್ತು ಆ ತಾಲ್ಲೂಕುಗಳಿಗೆ ಖರ್ಚು ಮಾಡಿದಂತಹ ಹಣ ಎಷ್ಟು ಎಂದು ಹೇಳುತ್ತೀರಾ?

ಶ್ರೀ ಬಸವರಾಜ ಮಾಗಾವಿ: ತಾಲ್ಲೂಕುವಾರು ಮಾಹಿತಿ ನನ್ನ ಹತ್ತಿರ ಇಲ್ಲ. ಆದರೆ ಸಾಮಾನ್ಯವಾಗಿ ಎಲ್ಲಾ ತಾಲ್ಲೂಕುಗಳಲ್ಲಿಯೂ ವ್ಯಯ ಮಾಡಿದ್ದಾರೆ. ಒಂದೆರಡು ತಾಲೂಕು ಗಳಲ್ಲಿ ಮಾತ್ರವಲ್ಲ.

ಶ್ರೀ ಕೆ ಎಚ್ ರಂಗನಾಥ್:— ನನ್ನ ತಾಲ್ಲೂಕಾದ ಮೂಡಿಗೆರೆಯಲ್ಲಿ ೧೨೮-೧೩೦ ಇಂಚು ಮಳೆಬೀಳುತ್ತದೆ ಹೀಗಿರುವುದರಿಂದ, ಚಿಕ್ಕಮಗಳೂರು ಜಿಲ್ಲೆಯ ಯಾವ್ಯಾವ ತಾಲೂಕುಗಳಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆ

ಶ್ರೀ ಬಸವರಾಜ ಮಾಗಾವಿ.—ಈ ಪ್ರಶ್ನೆ ಅಭಾವಕ್ಕೆ ಸಂಬಂಧಪಟ್ಟದಲ್ಲ. ಹೆಚ್ಚಾಗಿ ವ್ಯಯಮಾಡಿದ್ದು. ಮಾನ್ಯ ಸದಸ್ಯರು ಆನಂದಪಟ್ಟು ಕೊಳ್ಳಬೇಕು. ಏನೆಂದರೆ, ಇಡೀ ಜಿಲ್ಲೆಯಲ್ಲಿ ನಮ್ಮ ಕಾಂಗ್ರೆಸ್ ಪಕ್ಷದಿಂದ ಆರಿಸಿ ಬಂದ ಸದಸ್ಯರು ಯಾರು ಇಲ್ಲ, ಎಲ್ಲ ವಿರೋಧಪಕ್ಷದಿಂದ ಆರಿಸಿ ಬಂದವರು ಇದ್ದಾರೆ. ಆ ದರೂ ಎಲ್ಲಾ ಕ್ಷೇತ್ರಗಳಲ್ಲೂ ಸರಿಯಾಗಿ ಖರ್ಚು ಮಾಡಿದೆ.

ಶ್ರೀ ಕೆ ಎಚ್ ರಂಗನಾಥ.— ಹಾಗಲ್ಲ ಸ್ವಾಮಿ, ನಾನು ಕೇಳುತಿರುವುದು ಇವರು ರಸ್ತೆಗಳನ್ನು ರಿಪೇರಿ ಮಾಡದೆ, ಸರಿಯಾಗಿ ಹಣ ಖರ್ಚು ಮಾಡದೆ ಈ ರೀತಿ ೧೦-೧೫ ಲಕ್ಷ ರೂಪಾಯಿ ಖರ್ಚು ಮಾಡತಕ್ಕದ್ದು. ಸರಿಯೇ?.

Mr. Mr. SPEAKER.— do not permit a second supplementary
SRI K. H RANGNATH. May I know the rule under which I am not permitted to put the second supplementary?

MR SPEAKER.—The Hon. Member is aware that arc above 15 questions. I am following the practice and parliamentary conventions as obtaining in the U,K. One or two Supplementaries are allowed to the main questions and one or two more supplementaries are allowed to others who have interest and some knowledge about the subject matter. By that way they are able to dispose of nearly 40 questions a day I am also following the same procedurce here I therefore cannot allow a second supplmentary to be put by the same member.

ಶ್ರೀ ಎಂ.ಎಸ್. ಕೃಷ್ಣನ್.—ಈಗೆ ಉತ್ತರವಾಗಿ ೩.೨೬, ೭೧೬ ರೂಪಾಯಿಗಳು ಹೆಚ್ಚು ವೆಚ್ಚವಾಗಿದೆಯೆಂದು ಹೇಳಿದ್ದೀರಿ. ಈ ರೀತಿಯಾಗಿ ಹೆಚ್ಚು ವ್ಯಯವಾಗುದನ್ನು ತಪ್ಪಿಸುವುದಕ್ಕೆ ತಾವು ಏನು ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ? ಒಂದು ಪಕ್ಷ ಹೆಚ್ಚಿಗೆ ಖರ್ಚಾಗಿದ ರೆ, ಅದಕ್ಕೆ ಅತಿ ಮುಖ್ಯ ಕಾರಣಗಳು ಯಾವುವು?. ಯಾವ ತತ್ವಗಳ ಆಧಾರದ ಮೇಲೆ ಆರೀತಿಯಾಗಿ ಖರ್ಚುಮಾಡಿದ್ದೀರಿ ? ಯಾರ ಪ್ರಭಾವ ಕ್ಕೊಳಗಾಗಿಯೇನಾದರೂ ಈ ರೀತಿಯಾಗಿ ವೆಚ್ಚಮಾಡಿದ್ದೀರಾ?

ಶ್ರೀ ಬಸವರಾಜ ಮಾಗಾವಿ.—ಅಷ್ಟು ಹೆಚ್ಚು ವ್ಯಯವಾಗುವುದಕ್ಕೆ ಅವಕಾಶವಿಲ್ಲ.

ಶ್ರೀ ಎಂ ಎಸ್ ಕೃಷ್ಣನ್.— ಇವತ್ತು ಯಾವ್ಯಾವ ಕೆಲಸಗಳಿಗೆ ಮೊದಲ್ಲೇ ಪ್ಲಾನ್ಸ್ ಮತ್ತು ಎಸ್ಟಿಮೇಟ್ ಆಗಿವೆಯೋ ಅವುಗಳನ್ನು ತೆಗೆದುಕೊಳ್ಳಬೇಕು. ಅಭಾವ ಪರಿಸ್ಥಿತಿ ಇರುವ ದೃಷ್ಟಿಯಿಂವ ಮೊದಲು. ಅವುಗಳನ್ನು ಪೂರೈಸಬೇಕಾಗಿರುವುದರಿಂದ ಹೆಚ್ಚಿನ ಹಣ ಅವಕ್ಕೆ ಮೀಟ್ಟುತ್ತದೆಂದು ಮಂತ್ರಿಗಳು ಹೇಳಿದರು ಅದರಿಂದೇನೂ ಅವಶ್ಯಯವಾಗಿಲ್ಲವೇ?

ಶ್ರೀ ಬಸವರಾಜ ಮಾಗಾವಿ.—ಅವಶ್ಯಯ ಯಾವುದೂ ಆಗಿಲ್ಲ.

ಶ್ರೀ ಸಿದ್ಧಯ್ಯ ಕಾಶೀಮಠ್. ಎಗ್ಜಿಕ್ಯುಟಿವ್ ಇಂಜಿನಿಯರ್ ಪ್ರತಿವರ್ಷವೂ ಎಷ್ಟೆಷ್ಟು ಹೆಚ್ಚು ಹಣವನ್ನು ವ್ಯಯಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ?

ಶ್ರೀ ಬಸವರಾಜ ಮಾಗಾವಿ.— ಅವಕಾಶಕೂಡುವ ಪ್ರಶ್ನೆಯಲ್ಲ ಅಭಾವ ಪರಿಸ್ಥಿತಿ ಇದ್ದಾಗ್ಗೆ ಅನಾವಶ್ಯಕವಾಗಿ ಸ್ಕೇರ್ಸಿಟಿ ಡರ್ಕ್ಸ್‌ಮೇಲೆ ಖರ್ಚುಮಾಡಿಲ್ಲ. ಮಂಜೂರಾದ ವರ್ಕ್ಸ್‌ಗೆ ಹಣವನ್ನು ಖರ್ಚು ಮಾಡಿದ್ದಾರೆ. ಅದರಿಂದ ಜನಗಳಿಗೆ ಕೆಲಸಗಳನ್ನು ಒದಗಿಸಿದ್ದಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಪಿ.ಡಬ್ಲ್ಯು.ಡಿಯಲ್ಲಿ ದುಡ್ಡನ್ನು ಖರ್ಚು ಮಾಡುವುದಕ್ಕೆ ಯಾವ ರೀತಿಯಾದಂಥ ವಿಧಾನವಿಲ್ಲ. ಒಂದು ಜಿಲ್ಲೆಗೆ ಮಂಜೂರಾದಂಥ ದುಡ್ಡು ಇಷ್ಟೇ ಮಿತಿಯೊಳಗೆ ಒಬ್ಬ ಎಗ್ಸಿಕ್ಯುಟಿವ್ ಇಂಜಿನಿಯರ್ ಖರ್ಚುಮಾಡಬೇಕೆಂದು ಒಂದು ನಿಯಮವಿಲ್ಲವೇ?

ಶ್ರೀ ಬಸವರಾಜ ಮಾಗಾವಿ.— ನಿಯಮವಿದ್ದರೂ ಈ ರೀತಿಯಾಗಿ ಕಂಟಿನ್‌ಜೆನ್ಸಿಗಾಗಿ ಮೀಟ್ ಮಾಡಬೇಕೆಂದು ಚೀಫ್ ಇಂಜಿನಿಯರ್ ಹತ್ತಿರ ಲಂಪ್‌ಸಂ ಗ್ರಾಂಟ್ ಕೊಟ್ಟಿರುತ್ತಾರೆ. ವರ್ಷದ ಆಖೈರಿನೊಳಗೆ ಫೈನಲ್ಬಾಗಿ ತೀರ್ಮಾನಮಾಡಿದ್ದಾರೆ. ಆದ್ದರಿಂದ ಯಾವುದೇ ರೀತಿ ಅಕ್ರಮವಾ ಕೆಲಸಕಾರ್ಯಗಳನ್ನು ಮಾಡಲಿಲ್ಲ.

SRI AZEEZ SAIT .—The Hon. Minister was pleased to state that there are famine areas. May I know which are the famine stricken areas in Chickmagalur District. As we all know Chickmagalur District is not a famine-stricken area because there is sufficient rainfall. So, which are the taluks which are famine-stricken in that District.

SRI BASAWARAJ MAGAVI :—Though the total rainfall in the year is satisfactory, at times.

SRI K. H. RANGANATH .—He is avoiding answering.

MR. SPEAKER .—Let the hon. Minister complete his reply. If the reply is not satisfactory, then the member may seek clarifications.

ಶ್ರೀ ಕೆ. ಲಕ್ಕಪ್ಪ .—ಲೋಕೋಪಯೋಗಿ ಶಾಖೆಯ ಮಂತ್ರಿಗಳು ಚಿಕ್ಕಮಗಳೂರು ಜಿಲ್ಲೆ ಸಹ ಕ್ಷಾಮಡಾಮರಗಳಿಗೆ ತುತ್ತಾದ ಭಾಗ. ಕಡೂರು ಜಿಲ್ಲೆಯಲ್ಲಿಯೂ ಕ್ಷಾಮದ ಅಭಾವ ಹೆಚ್ಚಾಗಿದ್ದುದರಿಂದ ಅಂತಹ ಕಡೆಗಳಲ್ಲಿ ಹೆಚ್ಚಿಗೆ ಹಣವನ್ನು ವಿನಿಯೋಗಿಸಿದ್ದೇವೆ. ಮಲೆನಾಡು ಬಹಳ ಹಿಂದುಳಿದಿರುವ ಪ್ರದೇಶ. ಅಲ್ಲಿ ಈ ನಿಯಮವನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಸರಿಯಲ್ಲವೆನ್ನುವ. ಉದ್ದೇಶದಿಂದ ಅಲ್ಲಿ ಕ್ಷಾಮಕ್ಕೆ ತುತ್ತಾಗದೇ ಇರುವ ಕೆಲವು ಭಾಗಗಳು ಇದ್ದರೂ ಕೂಡ ಮಲೆನಾಡು ಪ್ರತ್ಯೇಕವಾಗಿ ಹಣ ಪಡೆದಂಥ ಜಿಲ್ಲೆಯಾಗಿರುವುದರಿಂದ ಅಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ತೀರ್ಮಾನಮಾಡಿ ಕೊಂಡಿದ್ದೇವೆ. ಆದ್ದರಿಂದ ಅಲ್ಲಿ ಹೆಚ್ಚಿಗೆ ಖರ್ಚು ಮಾಡಿದ್ದೇವೆಂದು ಹೇಳಿದರೆ, ಅದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆ.

ಶ್ರೀ ಎನ್. ಜಿ. ಹಾಲಪ್ಪ .—ಕಡೂರು ತಾಲ್ಲೂಕು ಅಫೆಕ್ಟೆಡ್ ಏರಿಯಾದೊಳಗೆ ಬರುತ್ತದೆ ಎಂಬು ದಾಗಿ ಹೇಳಿದ್ದೀರಿ. ಕಡೂರು ತಾಲ್ಲೂಕಿಗೆ ಎಷ್ಟು ಹಣವನ್ನು ಖರ್ಚುಮಾಡಿದ್ದೀರಿ? ಈ ಕಾಮಗಾರಿಗಳಲ್ಲಿ ಅನೇಕ ಕಾಮಗಾರಿಗಳು ಬೋಗಸ್ ವರ್ಕ್ಸ್ ಆಗಿರುವುದರಿಂದ ಅದನ್ನು ರಾಜಕಾರಣಿಗಳಿಗೋಸ್ಕರ ಮಾಡುತ್ತೀರಾ?

ಶ್ರೀ ಕೆ. ಲಕ್ಕಪ್ಪ .—ಈ ಪ್ರಶ್ನೆಯಲ್ಲಿ ವಿವರಗಳನ್ನು ಕೇಳಲಿಲ್ಲ. ಆ ಕಾರಣದಿಂದ ಆ ವಿವರಗಳು ನನ್ನಲ್ಲಿಲ್ಲ. ಆ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಅದನ್ನು ಅಪೇಕ್ಷಿಸಿದರೆ ಕೊಡುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ್ .—ಈ ತರಹ ಕಾಮಗಾರಿಗಳನ್ನು ಸ್ಕ್ರೂಯೊವೋಟಾ ತೆಗೆದುಕೊಂಡು ಮಾಡುತ್ತೀರಿ. ಅದನ್ನು ತಮ್ಮ ಇಲಾಖೆಗೆ ಸೇರಿಸಿಕೊಂಡ ಮೇಲೆ ಹಣವನ್ನು ಅವಕ್ಕೆ ಖರ್ಚು ಮಾಡು ತ್ತೀರಾ?

ಶ್ರೀ ಕೆ. ಲಕ್ಕಪ್ಪ.—ನಮ್ಮ ಇಲಾಖೆಗೆ ಸೇರಿಸಿಕೊಂಡಮೇಲೆ ಅದನ್ನು ಮಾಡುತ್ತೇವೆ. ಮಾನ ಸದಸ್ಯರು ಅದನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.